# ಪಿ ಕೋಟ್

## ಚಳಿಗಾಲಕ್ಕೆ ಪುರುಷರ ಹೊಸ ಫ್ಯಾಷನ್

ಕ್ಲಾಸಿಕ್ ಲುಕ್ ಬಯಸುವ ಯುವಕರ ವಾರ್ಡ್‌ರೋಬ್‌ನಲ್ಲಿ ಬೆಚ್ಚಗೆ ಕೂತಿದ್ದ ಕೋಟ್, ಬ್ಲೇಜರ್‌ಗಳು ರೂಪಾಂತರಗೊಂಡು ಇದೀಗ ಪಿ ಕೋಟ್‌ಗಳಾಗಿ ಫ್ಯಾಷನಬಲ್ ಎನಿಸಿಕೊಂಡಿವೆ; ಹುಡುಗರಿಗೆ ಆಕರ್ಷಕ ಆಯ್ಕೆಯಂತೆ ಕಾಣುತ್ತಿವೆ.

■ **ಶಶಿಕುಮಾರ್ ಸಿ.**



ಅವಳ ವಾರ್ಡ್‌ರೋಬ್‌ನಲ್ಲಿ ಕಾಣುವಂಥ ರಂಗುರಂಗಿನ, ಭಿನ್ನ ವಿಭಿನ್ನ ಮಾದರಿಯ ವಸ್ತ್ರವೈವಿಧ್ಯ ಅವನ ವಾರ್ಡ್‌ರೋಬ್‌ನಲ್ಲಿ ಕಾಣವು. ಅವಳಿಗಿರುವ ಫ್ಯಾಷನ್ ಆಯ್ಕೆಗಳು ಅವನಿಗಿಲ್ಲ. ಪುರುಷರ ಫ್ಯಾಷನ್ ಲೋಕದಲ್ಲಿ ಕಣ್ಣು ಹಾಯಿಸಿದರೆ, ಆಕರ್ಷಕವಾಗಿ ಕಾಣುವುದು ಬೆರಳೆಣಿಕೆಯಷ್ಟು ವಸ್ತ್ರ ಮಾದರಿಗಳು ಮಾತ್ರ. ಇದೀಗ ಇರುವ ಆಯ್ಕೆಗಳಲ್ಲೇ ವಿಶೇಷವಾಗಿ ಕಾಣುತ್ತಿದೆ ಪಿ ಕೋಟ್.

ಏನಿದು ಪಿ ಕೋಟ್ ಎಂದು ಹುಬ್ಬೇರಿಸಬೇಡಿ. ಹಲವು ಕಾರ್ಯಕ್ರಮಗಳಲ್ಲಿ, ನಗರ ಪ್ರದೇಶಗಳಲ್ಲಿ ಹಾಗೂ ಸಿನಿತಾರೆಯರ ಮೈಮೇಲೆ ಕಾಣಿಸಿಕೊಳ್ಳುವ ಪಿ ಕೋಟ್‌ಗಳನ್ನು ಕೋಟ್, ಬ್ಲೇಜರ್ ಮಾದರಿಯ ಮತ್ತೊಂದು ರೂಪವೆನ್ನಬಹುದು. ಕೋಟ್, ಬ್ಲೇಜರ್, ಆಫ್‌ಕೋಟ್‌ನಂತಹ ಪುರುಷರ ಉಡುಪುಗಳ ಸಾಲಿನಲ್ಲಿ ಚಳಿಗಾಲದ ವೇಳೆ ಪಿ ಕೋಟ್ ಮುನ್ನೆಲೆಯಲ್ಲಿ ಕಾಣಿಸಿಕೊಳ್ಳುತ್ತಿದೆ.

ಮಳೆಗಾಲದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಮಿಣುಕುಹುಳದಂತೆ, ಚಳಿಗಾಲದಲ್ಲಿ ಮಾತ್ರವೇ ಮಿಂಚುವ ಪಿ ಕೋಟ್, ಫ್ಯಾಷನ್ ದೃಷ್ಟಿಯಿಂದ ಈ ಕಾಲಕ್ಕೇ ಹೆಚ್ಚು ಒಪ್ಪುತ್ತದೆ. ಚಳಿ ದಾಂಗುಡಿ ಇಟ್ಟೊಡನೆ, ವಾರ್ಡ್‌ರೋಬ್‌ನ ಮೂಲೆ ಸೇರಿದ್ದ ಸ್ವೆಟರ್, ಜಾಕೆಟ್ (ಜರ್ಕಿನ್), ಪುಲ್‌ಓವರ್‌ಗಳಂತೆ ಪಿ ಕೋಟ್ ಸಹ ಹೊರಬಂದು ದೇಹವನ್ನು ಅಪ್ಪಿ ಬೆಚ್ಚನೆಯ ಹಿತಾನುಭವ ನೀಡುವುದರ ಜೊತೆಗೆ ಫ್ಯಾಷನ್ ಹೊಳಪನ್ನೂ ಹೆಚ್ಚಿಸುತ್ತದೆ.

‘ಚಳಿಗಾಲಕ್ಕೆ, ದೇಹ ಬೆಚ್ಚಗಿಡುವ ಬಟ್ಟೆಗಳೇ ಸಾಕಪ್ಪ, ಅದರಲ್ಲಿ ಫ್ಯಾಷನ್ ಬೇಕೇ?’ ಅನ್ನುವವರ ನಡುವೆ, ಫ್ಯಾಷನ್ ಪ್ರಿಯರ ಕಣ್ಣಿಗೆ ಪಿ ಕೋಟ್‌ಗಳು ಆಪತ್ಬಾಂಧವನಂತೆ ಕಾಣುತ್ತವೆ. ಚಳಿಗಾಲದಲ್ಲಿ ದೇಹಕ್ಕೆ ಬೆಚ್ಚನೆಯ ಹಿತ ನೀಡುವುದರೊಂದಿಗೆ ಫ್ಯಾಷನಬಲ್ ಆಗಿ ಕಾಣಿಸಿಕೊಳ್ಳಲು ಇವು ಹೇಳಿ ಮಾಡಿಸಿದಂತಿವೆ.